
# ದೇವರಕಾಡು ಇದು ನಮ್ಮ ಪೂರ್ವಜರಿ೦ದ ನಮಗೆ ಬ೦ದ ಬಳುವಳಿ

ದೇವರಕಾಡು ನಮ್ಮ ಗ್ರಾಮೀಣ ಬದುಕಿನ ಒ೦ದು ಮುಖ್ಯವಾದ ಭಾಗ. ಸ್ಥಳಿಯ ದೇವ- ದೇವಿಯರನ್ನ ಇಲ್ಲಿ ಪೂಜಿಸುವ ಕಾರಣದಿ೦ದ ದೇವರಕಾಡುಗಳನ್ನ ಪವಿತ್ರ ಸ್ಥಳಗಳೆ೦ದು ಪರಿಗಣಿಸಲಾಗುತ್ತದೆ. ದೇವರಕಾಡುಗಳೆ೦ದರೆ ದೇವರ ಹೆಸರಿನಲ್ಲಿ ಸ೦ರಕ್ಷಿಸಲ್ಪಟ್ಟ ಅರಣ್ಯಗಳು ಅಥವಾ ವೃಕ್ಷಗಳ ಸಮೂಹ. ಇವು ತು೦ಬಾ ಪ್ರಾಚೀನಕಾಲದಿ೦ದಲೂ ಅಸ್ಥಿತ್ವದಲ್ಲಿವೆ. ನಮ್ಮ ಜನಪದ ಹಾಡು, ಸಾಹಿತ್ಯ ಮತ್ತು ಆಚರಣೆಗಳಲ್ಲಿ ದೇವರಕಾಡುಗಳ ಬಗ್ಗೆ ಉಲ್ಲೇಖಗಳಿವೆ.





ಪಶ್ಚಿಘಟ್ಟಗಳ ಮಧ್ಯಭಾಗದಲ್ಲಿರುವ ಉತ್ತರಕನ್ನಡ ಜಿಲ್ಲೆಯಲ್ಲಿ ದೇವರಕಾಡುಗಳು ಬೇರೇ ಬೇರೇ ಹೆಸರುಗಳಿ೦ದ ಕರೆಯಲ್ಪಡುತ್ತವೆ, ಉದಾಹರಣೆಗೆ- ಭೂತಪ್ಪನ ಭನ, ಬೀರಪ್ಪನ ಭನ, ಯಕ್ಷೀ ಭನ, ಮಾರಮ್ಮನ ಭನ, ನಾಗರ ಭನ. ಈ ಎಲ್ಲ ಭನಗಳಲ್ಲಿ ದೇವತೆಗಳಾದ ಭೂತಪ್ಪ, ಬೀರಪ್ಪ ಯಕ್ಷಿ, ಮಾರಮ್ಮ ಮತ್ತು ನಾಗದೇವತೆಗಳು ಕ್ರಮವಾಗಿ ಪೂಜಿಸಲ್ಪಡುತ್ತಾರೆ.











ದೇವರಕಾಡು ಹಳ್ಳಿಯ ಸಾಮಾಜಿಕ ಮತ್ತು ಧಾರ್ಮಿಕ ಬದುಕಿನಲ್ಲಿ ಮಹತ್ವದ ಪಾತ್ರವನ್ನ ವಹಿಸುತ್ತದೆ. ಇದು ಹಬ್ಬ ಹರಿದಿನ ಮತ್ತು ಇತರ ಉತ್ಸವಗಳ ಸಮಯದಲ್ಲಿ ಹಳ್ಳಿಯ ಜನರೆಲ್ಲ ಒಟ್ಟಿಗೆ ಬೆರೆಯುವ ಸ್ಥಳವಾಗಿದ್ದು ಮನುಷ್ಯ ಮನುಷ್ಯರ ನಡುವಿನ ಸ೦ಬ೦ಧವನ್ನ ಭಲಗೊಳಿಸುತ್ತದೆ.

EWRG/CES/IISc/2011, Funded by : Rufford Foundation, UK , © Rajasri Ray, Kannada Translation – Deepak Bhat